(ಇಂದು ದಿನಾಂಕ 17.03.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು)

**ಪಾಟೀ ಸವಾಲು:- ವಾದಿ ಪರ ಶ್ರೀ. ಸಿ ಇ ಎಸ್ ವಕೀಲರಿಂದ:-**

ನಾನು 3ನೇ ತರಗತಿ ಓದಿರುತ್ತೇನೆ. ನಾನು ವೆಟರ್ ನರಿ ಇಲಾಖೆಯಲ್ಲಿ ಡಿ ಗ್ರೂಪ್ ನೌಕರನಾಗಿ ನಿವೃತ್ತಿ ಹೊಂದಿರುತ್ತೇನೆ. ವಾದಿಯರು ನನ್ನ ಸಹೋದರಿಯರು ಎಂದರೆ ಸರಿ. ನನ್ನ ತಂದೆ 2015 ರಲ್ಲಿ ತೀರಿಕೊಂಡಿರುತ್ತಾರೆ ಎಂದರೆ ಸರಿ. 4ನೇ ಪ್ರತಿವಾದಿ ನನ್ನ ಅಕ್ಕ ಎಂದರೆ ಸರಿ. ದಾವಾ ಆಸ್ತಿಗಳು ಒಟ್ಟು ಕುಟುಂಬದ ಆಸ್ತಿಗಳು ಎಂದರೆ ಸಾಕ್ಷಿಯು ಕೆಲವು ಒಟ್ಟು ಕುಟುಂಬದ ಆಸ್ತಿಗಳು , ಕೆಲವು ಒಟ್ಟು ಕುಟುಂಬದ ಆಸ್ತಿಗಳು ಅಲ್ಲ ಎಂದು ಹೇಳುತ್ತಾರೆ. ದಾವಾ ಆಸ್ತಿಗಳಲ್ಲಿ ಒಟ್ಟು ಕುಟುಂಬದ ಆಸ್ತಿ ಯಾವುದು ಮತ್ತು ಯಾವ ಆಸ್ತಿಗಳು ಒಟ್ಟು ಕುಟುಂಬದ ಆಸ್ತಿ ಅಲ್ಲ ಎಂದು ನಿಖರವಾಗಿ ಹೇಳಲು ಬರುವುದಿಲ್ಲ. ದಾವಾ ಆಸ್ತಿಯನ್ನು ಹೊರತುಪಡಿಸಿ ನಮ್ಮ ಕುಟುಂಬಕ್ಕೆ ಬೇರೆ ಆಸ್ತಿಗಳು ಇರುವುದಿಲ್ಲ. ವಾದಿಯರ ಮದುವೆಯನ್ನು ನನ್ನ ತಂದೆಯೇ ಮಾಡಿಸಿರುತ್ತಾರೆ ಎಂದರೆ ಸರಿ. 1ನೇ ವಾದಿಯ ಮದುವೆಯು ಯಲ್ಲಮ್ಮನ ದೇವಸ್ಥಾನದಲ್ಲಿ ಆಗಿದೆ ಎಂದರೆ ನೆನಪಿಲ್ಲ. 2 ಮತ್ತು 3ನೇ ವಾದಿಯ ಮದುವೆ ಆಗಿರುವುದು ನನಗೆ ನೆನಪು ಇದೆ. ಅವರ ಮದುವೆಯು ಚಿಕ್ಕತಿರುಪತಿಯಲ್ಲಿ ಆಗಿದೆ ಎಂದರೆ ಸರಿ. ಅವರ ಮದುವೆಯ ಖರ್ಚನ್ನು ಅವರ ಗಂಡಂದಿರ ಕುಟುಂಬದವರೇ ವಹಿಸಿರುತ್ತಾರೆ ಎಂದರೆ ಸರಿಯಲ್ಲ. 1ನೇ ವಾದಿಯ ಮದುವೆ ಕಾಲಕ್ಕೆ ಒಂದು ಜೊತೆ ಬಂಗಾರದ ಕಿವಿ ಓಲೆ ಹೊರತುಪಡಿಸಿ ಬೇರೆ ಏನನ್ನೂ ಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ. 1ನೇ ವಾದಿಗೆ ಕೊಟ್ಟ ಕಿವಿ ಓಲೆಯನ್ನು ತೆಗೆದು 2ನೇ ವಾದಿಯ ಮದುವೆಯ ಕಾಲಕ್ಕೆ 2ನೇ ವಾದಿಗೆ ಕೊಟ್ಟಿರುತ್ತಾರೆ ಎಂದರೆ ಸುಳ್ಳು. 2ನೇ ವಾದಿಯ ಕಿವಿ ಓಲೆಯನ್ನು ತೆಗೆದು 3ನೇ ವಾದಿಯ ಮದುವೆಯ ಕಾಲಕ್ಕೆ 3ನೇ ವಾದಿಗೆ ಮತ್ತೆ ಕೊಟ್ಟಿರುತ್ತಾರೆ ಎಂದರೆ ಸುಳ್ಳು. ಒಂದೇ ಕಿವಿ ಓಲೆ ಇಟ್ಟು ನನ್ನ ತಂದೆ ವಾದಿ ನಂ. 1 ರಿಂದ 3 ರವರ ಮದುವೆಯನ್ನು ಅವರವರ ಗಂಡಂದಿರ ಖರ್ಚಿನಲ್ಲಿ ಮದುವೆ ಮುಗಿಸಿರುತ್ತಾರೆ ಎಂದರೆ ಸುಳ್ಳು. 4ನೇ ವಾದಿಯ ಮದುವೆಯು ತಮಿಳುನಾಡಿನ ತಳಿ ಹತ್ತಿರ ಆಗಿರುತ್ತದೆ ಎಂದರೆ ಸರಿ . 4ನೇ ವಾದಿಯ ಗಂಡನೇ ಮದುವೆಯ ಖರ್ಚನ್ನು ವಹಿಸಿರುತ್ತಾರೆ ಎಂದರೆ ಸುಳ್ಳು. 4ನೇ ವಾದಿಯ ಗಂಡ 4ನೇ ವಾದಿಗೆ ನೀಡಿದ ಒಡವೆಯನ್ನು ನನ್ನ ಅಣ್ಣ ಶಿವಪ್ಪ ತೆಗೆದುಕೊಂಡು ಬಂದು ಅಡವು ಇಟ್ಟು ಸಾಲ ತೆಗೆದುಕೊಂಡಿರುತ್ತಾರೆ ಎಂದರೆ ಸರಿಯಲ್ಲ. ನನ್ನ ಅಣ್ಣ 2ನೇ ಪ್ರತಿವಾದಿ ಸದರಿ ಒಡವೆಯನ್ನು 4ನೇ ವಾದಿಗೆ ವಾಪಸ್ಸು ನೀಡದೇ

ಇರುವುದರಿಂದ ಅವರು ನ್ಯಾಯಾಲಯಕ್ಕೆ ಬಂದು ಸಾಕ್ಷಿ ಹೇಳಲು ಹಿಂಜರಿಯುತ್ತಿದ್ದಾರೆ ಎಂದರೆ ಸರಿಯಲ್ಲ.

2. ನನ್ನ ತಂದೆ ರಾಮಯ್ಯರವರು 4 ಜನ ಅಣ್ಣ ತಮ್ಮಂದಿರು ಎಂದರೆ ಸರಿ. ನನ್ನ ತಾತ ತೀರಿಕೊಂಡ ನಂತರ ನನ್ನ ತಂದೆ ಮತ್ತು ಅವರ ಮೂರು ಸಹೋದರರು ವಿಭಾಗ ಮಾಡಿಕೊಂಡಿರುತ್ತಾರೆ ಎಂದರೆ ಗೊತ್ತಿಲ್ಲ. ದಾವಾ ಆಸ್ತಿಗಳು ನನ್ನ ತಂದೆ ಮತ್ತು ಅವರ ಸಹೋದರರು ಮಾಡಿಕೊಂಡ ವಿಭಾಗದ ಮೂಲಕ ನನ್ನ ತಂದೆಯ ಪಾಲಿಗೆ ಬಂದಿರುವ ಆಸ್ತಿಗಳು ಎಂದರೆ ಸರಿ. ನನಗೆ ಈವಾಗ 61 ವರ್ಷ ವಯಸ್ಸಾಗಿರುತ್ತದೆ. ನಾನು ನಾಯನಹಳ್ಳಿಯಲ್ಲಿ ವಾಸವಿರುತ್ತೇನೆ ಎಂದರೆ ಸರಿಯಲ್ಲ. ನಾನು ಆನೇಕಲ್ ನಲ್ಲಿ ವಾಸವಿರುತ್ತೇನೆ. ನನ್ನ ಸಾಕ್ಷಿ ಪ್ರಮಾಣ ಪತ್ರದಲ್ಲಿ ನಾಯನಹಳ್ಳಿ ವಾಸಿ ಎಂದು ತೋರಿಸಿರುತ್ತೇನೆ ಎಂದರೆ ಸರಿ . ಅವಾಗ ನಾನು ಅಲ್ಲೇ ಇದ್ದೆನು. ಪ್ರಮಾಣಪತ್ರ ಸಲ್ಲಿಸುವ ಕಾಲಕ್ಕೆ ಅಂದರೆ 07.09.2025 ರಂದು ನಾನು ನಾಯನಹಳ್ಳಿ ಗ್ರಾಮದ ನಿವಾಸಿಯಾಗಿದ್ದೆನು. ನನ್ನ ಅಣ್ಣ 2ನೇ ಪ್ರತಿವಾದಿ ಸಹ ನಾಯನಹಳ್ಳಿ ನಿವಾಸಿ. ನಾನು ಮತ್ತು ನನ್ನ ಅಣ್ಣ ನಾಯನಹಳ್ಳಿಯಲ್ಲಿ ಜೊತೆಗೆ ಇರುವುದಿಲ್ಲ. ನಮ್ಮ ಮಧ್ಯೆ ವಿಭಾಗ ಆಗಿದೆ. ನಾನು ಮತ್ತು 2ನೇ ಪ್ರತಿವಾದಿ ಒಂದೇ ಮನೆಯಲ್ಲಿ ವಾಸವಿರುತ್ತೇವೆ ಎಂದರೆ ಸರಿಯಲ್ಲ. ನಾಯನಹಳ್ಳಿ ಗ್ರಾಮದಲ್ಲಿ ನಾನು ಬೇರೆ ಬಾಡಿಗೆ ಮನೆಯಲ್ಲಿ ವಾಸವಿದ್ದೆನು. ನಾನು ಬಾಡಿಗೆ ಮನೆಯಲ್ಲಿ ವಾಸವಿದ್ದೆನು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಬಾಡಿಗೆ ಮನೆಯಲ್ಲಿ ಇದ್ದೆನು ಎಂದು ತೋರಿಸಲು ದಾಖಲೆಗಳು ಇಲ್ಲ.

3. ವಾದಿಯರು ನನ್ನ ತಂದೆ ಜೀವಿತ ಕಾಲದಲ್ಲಿ ಮತ್ತು ಈಗಲೂ ಸಹ ನನ್ನ ಮನೆಗೆ ಹೋಗಿ ಬಂದು ಮಾಡುತ್ತಾರೆ ಎಂದರೆ ಸರಿಯಲ್ಲ. ವಾದಿಯರು ನನ್ನ ತಾಯಿಯ ಮನೆಗೆ ಹೋಗಿಬಂದು ಮಾಡುತ್ತಾರೋ ಎಂದು ನನಗೆ ಗೊತ್ತಿಲ್ಲ. ವಾದಿಯರು ಮತ್ತು ನಾವು ಒಟ್ಟು ಕುಟುಂಬದಲ್ಲಿ ವ್ಯವಸಾಯ ಮಾಡುತ್ತಿದ್ದೇವೆ ಎಂದರೆ ಸರಿಯಲ್ಲ. 2002ರಲ್ಲಿ ನನ್ನ ತಂದೆ ಯಾರ ಯಾರ ಮಧ್ಯೆ ವಿಭಾಗ ಮಾಡಿಕೊಟ್ಟಿರುತ್ತಾರೆ ಎಂದು ನೆನಪಿಲ್ಲ. ವಿಭಾಗ ಪತ್ರ ಆಗುವ ವಿಚಾರ ವಾದಿಯರಿಗೆ ಗೊತ್ತಿರಲಿಲ್ಲ ಎಂದರೆ ಸರಿಯಲ್ಲ. ವಾದಿಯರಿಗೆ ಆಸ್ತಿ ಕೊಡಬಾರದು ಎನ್ನುವ ಉದ್ದೇಶದಿಂದ ನಾನು ಮತ್ತು ನನ್ನ ಅಣ್ಣ ವಿಭಾಗ ಪತ್ರವನ್ನು ಸೃಷ್ಟಿ ಮಾಡಿದ್ದೇವೆ ಎಂದರೆ ಸರಿಯಲ್ಲ. ನನ್ನ ತಂದೆ ಇರುವ ಕಾಲದಲ್ಲಿ ಹೆಣ್ಣು ಮಕ್ಕಳು ಜಮೀನಿಗೆ ಬಂದು ದುಡಿದು ಸ್ವಲ್ಪ ತೆಗೆದುಕೊಂಡು ಹೋಗುತ್ತಿದ್ದರು ಎಂದರೆ ಸರಿಯಲ್ಲ. ನಾನು ಮತ್ತು 2ನೇ ಪ್ರತಿವಾದಿ ಸೇರಿ ದಾವಾ ಆಸ್ತಿ ಷಡ್ಯೂಲ್ ಎ ಗೆ ಸಂಬಂಧಿಸಿದಂತೆ ದಿನಾಂಕ

23.12.2002 ರಂದು 4ನೇ ಪ್ರತಿವಾದಿಯ ಹೆಸರಿನಲ್ಲಿ ದಾನಪತ್ರವನ್ನು ಸೃಷ್ಟಿ ಮಾಡಿದ್ದೇನೆ ಎಂದರೆ ಸರಿಯಲ್ಲ. 2012 ರಲ್ಲಿ ಸದರಿ ಆಸ್ತಿಯನ್ನು 4ನೇ ಪ್ರತಿವಾದಿ ಮಾರಾಟ ಮಾಡಲು ಮುಂದಾದಾಗ ನಾವು ಗಲಾಟೆ ಮಾಡಿರುತ್ತೇವೆ ಎಂದರೆ ಸರಿಯಲ್ಲ. 2012 ಫೆಬ್ರವರಿ ತಿಂಗಳಿನಲ್ಲಿ ವಾದಿಯರು ದಾವಾ ಆಸ್ತಿಯಲ್ಲಿ ಭಾಗ ಕೊಡಿ ಎಂದು ನನಗೆ ಮತ್ತು ನನ್ನ ತಂದೆಗೆ ಕೇಳಿದ್ದರು ಎಂದರೆ ಸರಿಯಲ್ಲ. ವಾದಿಯರು ವಕೀಲರ ಮೂಲಕ ನನಗೆ ನೋಟೀಸ್ ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ನನ್ನ ತಂದೆಯ ಕಾಲದಲ್ಲೇ ವಾದಿಯರು ಭಾಗ ತೆಗೆದುಕೊಂಡಿರುತ್ತಾರೆ. ಸರ್ವೆ ನಂ. 77 ರಲ್ಲಿ 1 ಎಕರೆ 4 ಗುಂಟೆ ಆಸ್ತಿಯನ್ನು ವಾದಿಯರು ಅವರ ಪಾಲಿಗೆ ತೆಗೆದುಕೊಂಡಿರುತ್ತಾರೆ. ನನ್ನ ತಂದೆ ಯಾವ ದಾಖಲೆಯ ಮೂಲಕ ಸದರಿ ಆಸ್ತಿಯನ್ನು ವಾದಿಯರಿಗೆ ಕೊಟ್ಟಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ವಾದಿಯರಿಗೆ ಯಾವುದೇ ಆಸ್ತಿಯನ್ನು ಭಾಗಾಂಶವಾಗಿ ಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ.

4. ಸರ್ವೆ ನಂ. 100 ಕ್ಷೇತ್ರ 4 ಎಕರೆ 5 ಗುಂಟೆ ನನ್ನ ಸ್ವಯಾರ್ಜಿತ ಆಸ್ತಿ ಎಂದು ತೋರಿಸಲು ನಾನು ಯಾವುದೇ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ದಿನಾಂಕ 20.02.1989 ರಂದು ಸದರಿ ಆಸ್ತಿಯನ್ನು ನಾನು ಮತ್ತು 2ನೇ ಪ್ರತಿವಾದಿ ನನ್ನ ಚಿಕ್ಕಪ್ಪನಾದ ಜಯಣ್ಣರವರಿಂದ ಖರೀದಿ ಮಾಡಿರುತ್ತೇವೆ. ಸದರಿ ಕ್ರಯ ಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ನನಗೆ ಯಾವುದೇ ತೊಂದರೆ ಇರುವುದಿಲ್ಲ. 1989 ರಲ್ಲಿ ನನಗೆ ಕೇವಲ 16 ವರ್ಷ ವಯಸ್ಸಿತ್ತು ಎಂದರೆ ನೆನಪಿಲ್ಲ. ವಾದಿಯರು ಒಟ್ಟು ಕುಟುಂಬದಲ್ಲಿ ಇದ್ದು ಸಂಪಾದನೆ ಮಾಡಿ ಬಂದ ಹಣದಿಂದ ಸದರಿ ಆಸ್ತಿಯನ್ನು ಖರೀದಿ ಮಾಡಲಾಗಿದೆ ಎಂದರೆ ಸರಿಯಲ್ಲ. ಈ ದಾವೆ ಸಲ್ಲಿಸಿದ ನಂತರ ಭಾಗ ಕೊಡುತ್ತೇವೆ ಎಂದು ನಾನು ವಾದಿಯರನ್ನು ನನ್ನ ಮನೆಗೆ ಕರೆಯಿಸಿಕೊಂಡಿದ್ದೆನು ಎಂದರೆ ಸರಿಯಲ್ಲ. ದಾವೆ ಚಾಲ್ತಿಯಲ್ಲಿರುವಾ ದಾವಾ ಷಡ್ಯೂಲ್ ಎ ಗೆ ಸಂಬಂಧಿಸಿದಂತೆ 4ನೇ ಪ್ರತಿವಾದಿಯಿಂದ 5ನೇ ಪ್ರತಿವಾದಿಗೆ ಮಾರಾಟ ಮಾಡಿದ ಬಗ್ಗೆ ಕ್ರಯ ಪತ್ರವನ್ನು ಸೃಷ್ಟಿ ಮಾಡಿರುತ್ತೇವೆ ಎಂದರೆ ಸುಳ್ಳು. 5ನೇ ಪ್ರತಿವಾದಿಯ ಸ್ವಾದೀನಕ್ಕೆ ಅಡ್ಡಿ ಪಡಿಸಿದ ಕಾರಣ ನಮ್ಮ ಮತ್ತು 5ನೇ ಪ್ರತಿವಾದಿಯ ಮಧ್ಯೆ ಕ್ರಿಮಿನಲ್ ಪ್ರಕರಣ ದಾಖಲಾಗಿದೆ ಎಂದರೆ ಸರಿಯಲ್ಲ. ನಂತರ ವಾದಿಯರ ಕಡೆಯಿಂದ ದಾವೆಯನ್ನು ಹಿಂದಕ್ಕೆ ತೆಗೆಯುವಂತೆ ಮಾಡುತ್ತೇನೆ ಎಂದು ವಾದಿಯರಿಗೆ ಆಮಿಷ ಒಡ್ಡಿ ಅವರ ಕಡೆಯಿಂದ ನಿಡಿ 4 ದೃಡೀಕರಣ ಪತ್ರವನ್ನು ಬರೆಯಿಸಿಕೊಂಡಿದ್ದೇನೆ ಎಂದರೆ ಸರಿಯಲ್ಲ. 5ನೇ ಪ್ರತಿವಾದಿಯಿಂದ ಹಣ ಪಡೆದುಕೊಂಡು ವಾದಿಯರಿಗೆ ಯಾವುದೇ ಹಣ ಕೊಡದೇ ನಿಡಿ 4ನ್ನು ಸೃಷ್ಟಿ ಮಾಡಿದ್ದೇನೆ ಎಂದರೆ

ಸರಿಯಲ್ಲ. ನಾನು ನಿಡಿ 4ನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ ನಂತರವೇ ವಾದಿಯರಿಗೆ ನಿಡಿ 4 ಆದ ಬಗ್ಗೆ ಮಾಹಿತಿ ಸಿಕ್ಕಿರುತ್ತದೆ ಎಂದರೆ ಸರಿಯಲ್ಲ. 4ನೇ ವಾದಿ ವಿದ್ಯಾಭ್ಯಾಸ ಮಾಡಿರುತ್ತಾರೆ. ಉಳಿದ ವಾದಿಯರು ಸ್ವಲ್ಪ ಸ್ವಲ್ಪ ವಿದ್ಯಾಭ್ಯಾಸ ಮಾಡಿರುತ್ತಾರೆ. ವಾದಿಯರು ಅನಕ್ಷರಸ್ಥರು ಇರುವ ಕಾರಣ ಅವರಿಗೆ ಮೋಸ ಮಾಡುವ ಉದ್ದೇಶದಿಂದ ನಿಡಿ 4ನ್ನು ಸೃಷ್ಟಿ ಮಾಡಿರುತ್ತೇನೆ ಎಂದರೆ ಸುಳ್ಳು. ನಾನು ಮತ್ತು ನನ್ನ ಅಣ್ಣ ಇವಾಗಲೂ ಒಟ್ಟು ಕುಟುಂಬದಲ್ಲೆ ಇದ್ದು ನಮ್ಮ ಮಧ್ಯೆ ಯಾವುದೇ ವಿಭಾಗ ಆಗಿರುವುದಿಲ್ಲ ಎಂದರೆ ಸರಿಯಲ್ಲ. ವಾದಿಯರಿಗೆ ದಾವಾ ಆಸ್ತಿಯಲ್ಲಿ 8 ರಲ್ಲಿ 4 ಅಂಶ ಭಾಗದ ಹಕ್ಕು ಇದೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ- ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)**

ಓದಿ ಹೇಳಿ ಕೇಳಿ ಸರಿ ಇದೆ.

ಪ್ರಧಾನ ಹಿರಿಯ ಸಿ.ಜೆ. ಮತ್ತು ಜೆ.ಎಂ.ಎಫ್.ಸಿ,
ಆನೇಕಲ್.